## ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಹನ್ಸಾ

‘ಆದರೆ ಪ್ರಾರಂಭಿಕವಾಗಿ ಆಯ್ಕೆಗೆ ಕೆಲವು ಮಾನದಂಡಗಳನ್ನು ‘ವಿಶ್ವ ಚಂದ್ರನೆಡೆಗೆ ಪ್ರವಾಸ ಕೇಂದ್ರ’ಕ್ಕೆ ಕಳುಹಿಸಿದ್ದು ಅದನ್ನು ಆಯ್ಕೆ ಸಂದರ್ಭದಲ್ಲಿ ಪಾಲಿಸಿ.’

‘ಆಯ್ಕೆ ಮಾಡಿ ಕಳುಹಿಸುವುದು ದೊಡ್ಡ ವಿಷಯವಲ್ಲ ಸರ್. ಆದರೆ ಚಂದ್ರನೆಡೆಗೆ ಹೋದವರಿಗೆ ಸೂಕ್ತ ಆಹಾರ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಬೇಕಾಗುತ್ತದೆ. ಆ ವಿಚಾರವನ್ನು ಪ್ರಸ್ತಾವನೆಯಲ್ಲಿ ತಿಳಿಸಿದರೆ ಅಧಿಕಾರಿ, ಸಿಬ್ಬಂದಿಗಳು ಹೋಗಲು ಉತ್ಸಾಹ ತೋರಿಸಬಹುದು.’

‘ಈ ವಿಚಾರವಾಗಿ ‘ವಿಶ್ವ ಚಂದ್ರನೆಡೆಗೆ ಪ್ರವಾಸ ಕೇಂದ್ರ’ದೊಡನೆ ಸಮಾಲೋಚಿಸಿ ತಿಳಿಸುತ್ತೇವೆ. ಅಲ್ಲಿಗೆ ಹೋಗುವುದು ಒಂದು ಸುಯೋಗವೆನ್ನಬೇಕು. ಹಲವರು ಅಲ್ಲಿಗೆ ಮನರಂಜನೆಗಾಗಿ ತೆರಳುತ್ತಿರುವುದರಿಂದ ಅಂತಹ ಅವಕಾಶ ಸಿಗುವುದೇ ಅದೃಷ್ಟವೆನ್ನಬೇಕು.’

ಈ ಮಾತಿಗೆ ಸಭೆಯಲ್ಲಿ ಗುಸು ಗುಸು ಶುರುವಾಗಿತ್ತು.

